# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆಃ 5072/2025
## ಮತ್ತು
## ಸತ್ರ ಪ್ರಕರಣ ಸಂಖ್ಯೆಃ 5077/2025

ಪ್ರಾ ಸಾ 2 ಚಾ ಸಾ 3

ಹೆಸರುಃ ಶ್ರವಣ ಕುಮಾರ್

ತಂದೆಯ ಹೆಸರುಃ ಶ್ಯಾಮಣ್ಣ

ವಯಸ್ಸುಃ 30 ವರ್ಷ

ಉದ್ಯೋಗಃ ಬೀಟ್ ಫಾರೆಸ್ಟ್ (ಗಸ್ತು ವನ ಪಾಲಕ)

ವಾಸಃ ಶ್ರೀರಂಗಪಟ್ಟಣ

**ದಿಃ 31.07.2026** ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. ನಾನು 2025 ಮೇ ಯಿಂದ ಈ ವರೆಗೂ ಕೆ ಶೆಟ್ಟಿ ಹಳ್ಳಿ ಅರಣ್ಯ ಪ್ರದೇಶದ ಗಸ್ತು ವನಪಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ .

2. ಜೂನ್ 9 , 2025 ರಂದು ನಾನು ಕೆ ಶೆಟ್ಟಿಹಳ್ಳಿ ಅರಣ್ಯ

ಪ್ರದೇಶದಲ್ಲಿ ಗಸ್ತು ಪಾಲಕನಾಗಿ ಸಿಬ್ಬಂದಿಗಳೊಂದಿಗೆ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸುಮಾರು ಮದ್ಯಾಹ್ನ 1 ರಿಂದ 2 ಗಂಟೆಯ ಸಮಯದಲ್ಲಿ ಯಾರೋ ಆಸಾಮಿಗಳು ಮರಗಳನ್ನು ಕಡಿಯುವ ಶಬ್ದ ಕೇಳಿ ಬಂತು . ಹತ್ತಿರ ಹೋಗಿ ನೋಡಿದಾಗ ಇಬ್ಬರು ಅಸಾಮಿಗಳು ಶ್ರೀಗಂದದ ಚಕ್ಕೆಗಳೊಂದಿಗೆ ಇನ್ನೊಂದು ಶ್ರೀಗಂದದ ಮರವನ್ನು ಅಗಿಯುತ್ತಿದ್ದರು. ಹತ್ತಿರ ಹೋಗಿ ಹಿಡಿಯಲು ಪ್ರಯತ್ನಿಸಿದಾಗ ಒಬ್ಬನು ಸೆರೆಸಿಕ್ಕಿದ , ಇನ್ನೊಬ್ಬ ಓಡಿ ಹೋದ. ಸೆರೆಸಿಕ್ಕಿದ ಆಸಾಮಿಯ ಹೆಸರು ವೆಂಕಟೇಶ ಸಿ ಬಿನ್ ಸೋಟಯ್ಯ . ಶಬ್ದ ಕೇಳಿದ ತಕ್ಷಣ ಆರ್ ಎಫ್ ಓ ರವರಿಗೆ ವಿಷಯ ತಿಳಿಸಿದ್ದು ಉಪ ಅರಣ್ಯಾದಿಕಾರಿಗಳು ಮತ್ತು ಆರ್ ಎಫ್ ಓ , ಅವರ ಸಿಬ್ಬಂದಿಗಳು ಬಂದು ನಾಲ್ಕು ತಂಡಗಳನ್ನು ರಚಿಸಿಕೊಂಡರು.

3. ನಮ್ಮ ತಂಡದವರು ಸಿ ವೆಂಕಟೇಶನನ್ನು ಸೆರೆಹಿಡಿದಿರುತ್ತಾರೆ. ಸಿಕ್ಕಿ ಹಾಕಿಕೊಂವನ ಹತ್ತಿರ ಒಂದು ಪಂಚೆಯ ಗಂಟಿನಲ್ಲಿ ಶ್ರೀಗಂದದ ಚಕ್ಕೆಗಳು ಮತ್ತು ಎರಡು ಬುಡಗಳು ಇತ್ತು , ಒಂದು ಹಾರೆ ಮತ್ತು ಒಂದು ಕತ್ತಿ ಇತ್ತು .

4. ಆರ್ ಎಫ್ ಓ ಮತ್ತು ಉಪವಿಭಾಗದಿಕಾರಿಗಳು ವಿಚಾರಿಸಿದಾಗ ಸೆರೆಸಿಕ್ಕ ಆಸಾಮಿಯು ಮದ್ಯಾಹ್ನ ಗೋವಿಂದ ಬಿನ್ ರಾಜು ವಿನ ಜೊತೆ ತಾನು ಅರಣ್ಯಕ್ಕೆ ಬಂದು ಬೆಳಗ್ಗೆ 11 ಗಂಟೆಯಿಂದಲೂ ಹಣ ಮಾಡುವ ಉದ್ದೇಶಕ್ಕೆ ಗಂದದ ಮರಗಳನ್ನು ಚಕ್ಕೆ ಮಾಡುತ್ತಿದ್ದೆವು ಎಂದು ತಿಳಿಸಿದ . ಸ್ಥಳ ಮಹಜರು ಮಾಡಿ ಕೊಂಡು ವಶಪಡಿಸಿಕೊಂಡ ಗಂದದ ಚಕ್ಕೆಗಳು ಮತ್ತು ಎರಡು ಬುಡಗಳನ್ನು ಅಮಾನತ್ತು ಪಡಿಸಿಕೊಂಡೆವು. ಸ್ಥಳಮಹಜರು ನಾನು ಬರೆದು ಕೊಂಡೆನು. ವೆಂಕಟೇಶ ಹೇಳಿದಂತೆ ಮಹಜರನ್ನು ಬರೆದುಕೊಂಡೆನು . ಆರ್ ಎಫ್ ಓ ಅವರ ಉಕ್ತಲೇಖನದಂತೆ ಮಹಜರು ಬರೆದುಕೊಂಡಿದ್ದೇನೆ. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ವಲಯ ಕಚೇರಿಗೆ ಕೊಟ್ಟಿದ್ದೇವೆ .

5. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ . ಸಾಕ್ಷಿ ಗುರುತಿಸಿದ ದಾಖಲೆಯು ನಿಪಿ 1 ಆಗಿದ್ದು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು.

6. ಸದರಿ ವಶಪಡಿಸಿಕೊಂಡ ವಸ್ತುಗಳನ್ನು ಮತ್ತು ಆಸಾಮಿಯನ್ನು ನೋಡಿದರೆ ಗುರುತಿಸುತ್ತೇನೆ.

7. 1ನೇ ಆರೋಪಿಯನ್ನು ಈ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ , ಆತನ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಆತನ ವಕೀಲರು ತಿಳಿಸಿರುತ್ತಾರೆ. ಸಾಕ್ಷಿಗೆ ಮುದ್ದೆಮಾಲು 1-29 ಚಕ್ಕೆಗಳು, ಮುದ್ದೆಮಾಲು.2- ಎರಡು ಬುಡಗಳು , ಮುದ್ದೆಮಾಲು-3, 4 ನ್ನು ತೋರಿಸಿದಾಗ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ .

8. ಆ ದಿನ ತಪ್ಪಿಸಿಕೊಂಡು ಹೋದ ವ್ಯಕ್ತಿ ಗೋವಿಂದ ಇಂದು ನ್ಯಾಯಾಲಯದಲ್ಲಿ ಇದ್ದಾರೆ ಆತನೇ ಗೋವಿಂದ ಎಂದು ಮಾಹಿತಿಯನ್ನು ವೆಂಕಟೇಶ ಕೊಟ್ಟಿರುತ್ತಾರೆ. ಮುಂದಿನ ಕ್ರಮಗಳನ್ನು ಆರ್ ಎಪ್ ಓ ಕಚೇರಿಯಿಂದ ಮಾಡಿರುತ್ತಾರೆ .

9. ಆ ದಿನ ಗಸ್ತು ಕರ್ತವ್ಯಕ್ಕೆ ಹೋಗಿದ್ದಾಗ ನನ್ನೊಂದಿಗೆ ರಾಜೇಂದ್ರ ಮತ್ತು ಲೊಕೇಶ ಇದ್ದರು .

<u>ಪಾಟೀ ಸವಾಲುಃ 1 ನೇ ಆರೋಪಿ ಪರವಾಗಿ ಃ</u>
<u>ಶ್ರೀಮತಿ ಹೆಚ್ ಎನ್ ಜಿ ವಕೀಲರಿಂದಃ</u>

10. ನಾನು ಬಿ ಎ ಪದವೀದರ . ನಾನು ಘಟನೆಯ ದಿವಸ ಬೆಳಗ್ಗೆ 9.30 ಗಂಟೆಗೆ ಕಚೇರಿ ಬಿಟ್ಟಿರುತ್ತೇನೆ . ನಾನು ಆ ದಿನ ಕಚೇರಿಯ ಮೂವ್ ಮೆಂಟ್ ರಿಜಿಸ್ಟರಿನಲ್ಲಿ ಸಹಿ ಮಾಡಿದ್ದೇನಾ ಎಂದರೆ ನನ್ನ ದಿನಚರಿಯಲ್ಲಿ ಬರೆದುಕೊಂಡಿದ್ದೇನೆ . ರಾಜೇಂದ್ರ ಮತ್ತು ಲೋಕೇಶ ನನ್ನೊಂದಿಗೆ ಗಸ್ತು ತಿರುಗಾಟಕ್ಕೆ ನಡೆದುಕೊಂಡು ಹೋದರು .

11. ನಮ್ಮ ಕಚೇರಿಯಿಂದ ಕೆ ಶೆಟ್ಟಿಹಳ್ಳಿ ಏತನೀರಾವರಿ ಪ್ರದೇಶ 8 ಕಿ ಮೀ ದೂರ ಆಗುತ್ತದೆ. ಸದರಿ ರಸ್ತೆಯಲ್ಲಿ ಸಾರ್ವಜನಿಕರು ಮತ್ತು ವಾಹನಗಳು ಓಡಾಡುತ್ತವೆ ಎಂದರೆ ಹೌದು. ನಾನು ಮೇಲಾದಿಕಾರಿಗಳಿಗೆ ಕರೆ ಮಾಡಿದಾಗ ಮದ್ಯಾಹ್ನ 1 ರಿಂದ 2 ಗಂಟೆಯಾಗಿತ್ತು . ನಾನು ಆರೋಪಿಗಳ ಚಲನ ವಲನವನ್ನು ಸೆರೆಸಿಕ್ಕುವ ಮೊದಲು ಮೊಬೈಲ್ ನಲ್ಲಿ ಸೆರೆ ಹಿಡಿದಿಲ್ಲ . ಅವರನ್ನು ದೂರದಿಂದ ಗಮನಿಸುತ್ತಿದ್ದೆವು . ನಾವು ಅವರನ್ನು ಗಮನಿಸುತಿತದೆದವು ಹಾಗೂ ಸೆರೆಹಿಡಿದೆವು

ಎಂದು ಹೇಳುವುದು ಎಂದರೆ ಸುಳ್ಳು, ಆರೋಪಿಗಳು ಅಲ್ಲಿಗೆ ಬಂದಿರಲೇ ಇಲ್ಲ ಎಂದರೆ ಸರಿಯಲ್ಲ. ಉಪ-ವಲಯಾದಿಕಾರಿಗಳು ನಾನು ಕರೆ ಮಾಡಿದ ನಂತರ ಮದ್ಯಾಹ್ನ 3 ಗಂಟೆಯ ಒಳಗಡೆ ಬಂದರು .

12. ಆರೋಪಿಯನ್ನು ಸೆರೆ ಹಿಡಿದೆ ಎನ್ನುವ ಸ್ಥಳದಲ್ಲಿಯೇ ದಸ್ತಗಿರಿ ಮಹಜರು ಮಾಡಿರುತ್ತಾರೆ .

13. ಘಟನೆ ನಡೆದಿದೆ ಎನ್ನಲಾದ ಸ್ಥಳದಿಂದ 1 ನೇ ಆರೋಪಿಯನ್ನು ಸೆರೆ ಹಿಡಿದ ಸ್ಥಳಕ್ಕೆ ಸುಮಾರು 100 ಮೀಟರ್ ನ ದೂರ ಇದೆ . ಓಡಿ ಹೋದ ಆರೋಪಿಯು ದರಿಸಿದ್ದ ಬಟ್ಟೆಗಳ ಬಗ್ಗೆ ಮಹಜರಿನಲ್ಲಿ ನಮೂದು ಮಾಡಿದ್ದೇವೆ .

14. ವಶಪಡಿಸಿ ಅಮಾನತ್ತು ಪಡಿಸಿದ ಚಕ್ಕೆಗಳ ಮೇಲೆ ಪ್ರತ್ಯೇಕ ಸೀಲುಗಳನ್ನು ಮಾಡಿಲ್ಲ ಎಂದರೆ ಹೌದು . ಅವುಗಳನ್ನು ಒಟ್ಟಿಗೆ ಒಂದೇ ಸೀಲಿನಲ್ಲಿ ಮಾಡಿರುತ್ತೇವೆ .

15. ಎರಡು ಶ್ರೀಗಂದದ ಬುಡಗಳನ್ನು ತೆಗೆದ ಬಗ್ಗೆ ಅವುಗಳ

ಬುಡ ಇದ್ದ ಜಾಗದಲ್ಲಿ ಮಹಜರು ಮಾಡಿದ್ದೀರಾ ಎಂದರೆ ಹೌದು .

16. ವಶಪಡಿಸಿಕೊಂಡ ಹಾರೆ ಮತ್ತು ಕತ್ತಿಗಳು ಸಾಮಾನ್ಯವಾಗಿ ನಮ್ಮ ಕಚೇರಿಗಳಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಅವುಗಳನ್ನು ರೈತರು ಉಪಯೊಗಿಸಬಹುದು ಎಂದರೆ ಹೌದು ಆದರೆ ಅವುಗಳು ಸ್ಥಳದಲ್ಲಿ ಆರೋಪಿಗಳ ಕೈಯಲ್ಲಿ ಇತ್ತು . ಮುದ್ದೆಮಾಲುಗಳನ್ನು ವಶಪಡಿಸಿಕೊಂಡ ಸ್ಥಳದಲ್ಲಿ ಫೊಟೋಗಳನ್ನು ತೆಗೆದಿದ್ದೇವೆ . ಮಹಜರಿಗೆ ಸಾರ್ವಜನಿಕ ವ್ಯಕ್ತಿಗಳನ್ನು ಪಂಚರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಹೌದು , ಯಾಕೆಂದರೆ ಆ ಸ್ಥಳವು ರಸ್ತೆಯಿಂದ 500 ಮೀಟರ್ ನ ಒಳಗಡೆ ಕಾಡಿನಲ್ಲಿ ಬರುತ್ತದೆ . ಆರೋಪಿಗಳು ದರಿಸಿದ್ದ ಚಪ್ಪಲಿ ಮತ್ತು ಬಟ್ಟೆಗಳ ಬಗ್ಗೆ ಬರೆದಿದೆ . ಮಹಜರಿನಲ್ಲಿ ಮೇಲಾದಿಕಾರಿಗಳ ಉಕ್ತಲೇಖನದ ಮೇರೆಗೆ ಬರೆದಿದ್ದೇನೆ ಎಂದು ನಮೂದು ಇಲ್ಲ ಎಂದರೆ ಹೌದು , ಅವರ ಸಮಕ್ಷಮದಲ್ಲಿ ಬರೆದಿದ್ದೇನೆ ಎಂದು ಇದೆ ಎನ್ನುತ್ತಾರೆ .

17. ಆರೋಪಿತರು ಎಂದೂ ಸಹ ಕೃತ್ಯ ನಡೆದ ಸ್ಥಳಕ್ಕೆ

ಹೋಗಿಲ್ಲ ಹಾಗೂ ಕೃತ್ಯ ನಡೆಸಿಲ್ಲ ಆದರೂ ಸಹ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ದಸ್ತಗಿರಿ ಮಾಡುವ ಸಂದರ್ಭದಲ್ಲಿ ಪೊಟೋಗಳನ್ನು ತೆಗೆದು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ.

18. ಆ ದಿನ ನಾನು ಕರ್ತವ್ಯ ಕ್ಕೆ ಹಾಜರಾಗಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ವಲಯ ಕಚೇರಿಗೆ ಸಲ್ಲಿಸಿದ್ದೇನೆ . ನಮ್ಮ ಮೇಲಾದಿಕಾರಿಗಳ ಆದೇಶದಂತೆ ಅಂಕಿ ಅಂಶಕ್ಕೋಸ್ಕರ ಆರೋಪಿಗಳು ಪ್ರಕರಣದಲ್ಲಿ ಬಾಗಿಯಾಗದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಮುದ್ದೆಮಾಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಹಾಕಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ . ಶ್ರೀ ಎಸ್ ಎಸ್ ಎ ವಕೀಲರಿಂದಃ**

19. ನಾನು ಘಟನೆ ನಡೆಯಲಾಗಿದೆ ಎಂದು ಹೇಳಿದ ದಿನ ಬೆಳಗ್ಗೆ 9.30 ರಿಂದ ಸಂಜೆ 6.00 ಗಂಟೆಯವರೆಗೆ ಕೆಲಸ

ಮಾಡಿದ್ದೇನೆ .ನಾವು ಕಚೇರಿಗೆ ಬಂದ ತಕ್ಷಣ ಕೆ ಶೆಟ್ಟಿ ಹಳ್ಳಿ ಅರಣ್ಯ ಪ್ರದೇಶಕ್ಕೆ ಬೀಟ್ ಕೆಲಸಕ್ಕೆ ಹೋಗುತ್ತೇವೆ . ಪುನಃ ಸಂಜೆ ಬಂದ ನಂತರ ಕಚೇರಿಯಲ್ಲಿ ದಿನಚರಿಗೆ ಸಹಿ ಮಾಡಿ ಮನೆಗೆ ಹೋಗುತ್ತೇವೆ . ಆ ದಿನ ಸುಮಾರು 1 ರಿಂದ 2 ಗಂಟೆಯ ಸಮಯದಲ್ಲಿ ನಾನು ಆರೋಪಿಗಳನ್ನು ನೋಡಿದೆ. ಆ ಸಮಯದಲ್ಲಿ ನಾನು ಆರೋಪಿಗಳನ್ನು ನೋಡಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಾವು ನೋಡಿದ ಸ್ಥಳದಿಂದ ಆರೋಪಿಗಳು ಇದ್ದರು ಎನ್ನಲಾದ ಸ್ಥಳಕ್ಕೆ ಸುಮಾರು 100 ಮಿಟರ್ ದೂರ ಇದೆ . 100 ಮೀಟರ್ ದೂರದಿಂದ ಆರೋಪಿಗಳ ಮುಖ ಚಹರೆ ಮತ್ತು ಬಟ್ಟೆಗಳನ್ನು ಗುರುತಿಸಲಾಗುತ್ತದೆಯೆ ಎಂದರೆ ಗುರುತಿಸಬಹುದು .

20. 2 ನೇ ಆರೋಪಿಯ ಮುಖ ಚಹರೆ ಮತ್ತು ಆತ ದರಿಸಿದ್ದ ಬಟ್ಟೆಯ ಬಗ್ಗೆ ಅಮಾನತ್ತಿನಲ್ಲಿ ನಮೂದು ಮಾಡಿಲ್ಲ ಎಂದರೆ ಹೌದು . ಸದರಿ ಚಹರೆ ಮತ್ತು ಆತ ದರಿಸಿದ್ದ ಬಟ್ಟೆಯ ಬಗ್ಗೆ ಅಮಾನತ್ತು ನಲ್ಲಿ ಬರೆಯಲು ತೊಂದರೆ ಇತ್ತಾ ಎಂದರೆ ಇಲ್ಲ.

21. ಘಟನೆ ನಡೆಯಲಾಯಿತು ಎನ್ನುವ ಪ್ರದೇಶ ಮತ್ತು ನಮ್ಮ ಕಚೇರಿಯ ಮದ್ಯೆ ಸುಮಾರು ಗ್ರಾಮಗಳು ಬರುತ್ತವೆ ಎಂದರೆ ಹೌದು . ಹಾಗೂ ಹತ್ತಿರದಲ್ಲಿ ಮುಖ್ಯ ರಸ್ತೆ ಇದೆ . ಅಲ್ಲಿ ವಾಹನಗಳ ಓಡಾಟ ಇದೆ . ಆ ದಿನ ಯಾರ್ಯಾರು ಯಾವ ಯಾವ ತಂಡದಲ್ಲಿ ಇದ್ದೆವು ಎಂದು ಮಹಜರು ಮತ್ತು ಹೇಳಿಕೆಯಲ್ಲಿ ತಿಳಿಸಿದ್ದಿರಾ ಎಂದರೆ ಮಹಜರಿನಲ್ಲಿ ನಾಲ್ಕು ತಂಡಗಳು ಮಾಡಿದ ಬಗ್ಗೆ ತಿಳಿಸಿದ್ದೇನೆ , ಯಾರ್ಯಾರು ಯಾವ ಯಾವ ತಂಡ ಎಂದು ತಿಳಿಸಿದ್ದೇವೆ .

22. ಸದರಿ ನಾಲ್ಕು ತಂಡಗಳಲ್ಲಿ ಯಾರ್ಯಾರು ಯಾವ ಯಾವ ತಂಡಗಳಲ್ಲಿ ಇದ್ದರು ಎಂದು ಹೇಳಲಾಗುತ್ತದಾ ಎಂದರೆ ಹೇಳುತ್ತೇನೆ . ನಾನು , ರಾಜೇಂದ್ರ , ಲೋಕೇಶ ಒಂದು ತಂಡ, ಬಸವರಾಜು , ಬಾಲಕೃಷ್ಣ ಎಂಬ ಇಬ್ಬರ ಇನ್ನೊಂದು ತಂಡ . ವಿನೋದ್ , ನಾಗರಾಜು ರವರ ಇನ್ನೊಂದು ತಂಡ . ಆರ್ ಎಫ್ ಓ ಮತ್ತು ವಾಹ ನ ಚಾಲಕರ ಇನ್ನೊಂದು ತಂಡ . ಆರ್ ಎಫ್ ಓ ಅವರ ಹೆಸರು - ವಿನೋದ್ ಗೌಡ . ನಾಗರಾಜು ರವರ ಒಟ್ಟಿಗೆ ಇದ್ದ ವಿನೋದ

ಎಂದರೆ ಅರಣ್ಯ ವೀಕ್ಷಕ . ನಾವು ಒಟ್ಟು 9 ಜನ ಇದ್ದೆವು . ಚಾಲಕ ಇದ್ದ ಆತನ ಹೆಸರು ಚನ್ನ ಕೇಶವ . ಚಾಲಕನೂ ಸೇರಿ ಒಂಭತ್ತು ಜನ .

23. 2 ನೇ ಆರೋಪಿಯನ್ನು ಸೆರೆಹಿಡಿಯಲು ತೊಂದರೆ ಇತ್ತಾ ಎಂದರೆ ಅರಣ್ಯ ಪ್ರದೇಶವಾಗಿದುದರಿಂದ ಹಿಡಿಯಲು ಆಗಲಿಲ್ಲ. ನಾವು ಇದ್ದೆವು ಎನ್ನಲಾದ 9 ಜನಕ್ಕೂ ಅರಣ್ಯ ಪ್ರದೇಶದ ಮಾಹಿತಿ ಅಂದರೆ ಎಲ್ಲೆಲ್ಲಿ ರಸ್ತೆಗಳು ಹೋಗುತ್ತವೆ ಎಂದು ತಿಳಿದಿದೆ ಎಂದರೆ ಹೌದು . ಅರಣ್ಯದಲ್ಲಿ ಎಲ್ಲೆಲ್ಲಿ ಯಾವ ಯಾವ ಮರಗಳು ಇರುವುದು ಗೊತ್ತಿದೆ ಎಂದರೆ ಹೌದು . ಸದರಿ 9 ಜನರೂ ಕೂಡ 50 ವಯಸ್ಸಿನ ಒಳಗಿನವರು . ನಾನು ಆರ್ ಎಫ್ ಓ ವಿನೋದ್ ಗೌಡ ಅವರ ಸಮಕ್ಷಮದಲ್ಲಿ ಹೇಳಿಕೆ ಕೊಟ್ಟಿದ್ದೇನೆ . ನಾನು ಅವರ ಮುಂದೆ ಹೇಳಿಕೆ ಕೊಟ್ಟಿಲ್ಲ , ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿಕೆ ಕೊಟ್ಟಿರುವುದು ಎಂದರೆ ಸರಿಯಲ್ಲ.

24. 2 ನೇ ಆರೋಪಿಯ ಚಹರೆ ನೋಡದಿದ್ದರೂ ಸಹ ಚಹರೆ

ಗೊತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

25. 2 ನೇ ಆರೋಪಿಗೆ ನಮ್ಮನ್ನು ತಪ್ಪಿಸಿಕೊಂಡು ಹೋಗುವಷ್ಟು ದೃಷ್ಟಿ ಸಾಮರ್ಥ್ಯ ಇರಲಿಲ್ಲ ಎಂದರೆ ಕುರುಚಲು , ಗಿಡ ಮರಗಳು ಇರುವುದರಿಂದ ತಪ್ಪಿಸಿಕೊಂಡ .

26. ರಾಜೇಂದ್ರ ಮತ್ತು ಲೋಕೇಶ ರನ್ನು ಒಳಗೊಂಡ ತಂಡ ಇರಲಿಲ್ಲ , ಅದನ್ನು ಸೃಷ್ಟಿ ಮಾಡಿ ಹೇಳುತ್ತಿರುವುದು ಎಂದರೆ ಸರಿಯಲ್ಲ. ಅಮಾನತುಜ್ನ ಮಾಡಲಾಗಿದೆ ಎಂದು ಹೇಳುವ ಬಟ್ಟೆಯು ನಮ್ಮ ಪ್ರಕಾರ ಅರಣ್ಯದಲ್ಲೆ ಸಿಕ್ಕಿದು ಎಂದರೆ ಸುಳ್ಳು. ಸದರಿ ವಶಪಡಿಸಿಕೊಂಡ ಪಂಚೆಯನ್ನು ಮುದ್ದೆಮಾಲಾಗಿ ಮಾಡಲು ತೊಂದರೆ ಇತ್ತಾ ಎಂದರೆ 29 ಚಕ್ಕೆಗಳು ಬಟ್ಟೆ ಸಹಿತ ಗಂಟಿನ ಒಳಗೆ ಇತ್ತು ಎಂದು ಬರೆದಿದ್ದೇವೆ . ಆ ಬಟ್ಟೆಗೆ ಪ್ರತ್ಯೇಕ ಕ್ರಮಸಂಖ್ಯೆ ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ .

27. ಮುದ್ದೆ ಮಾಲು 1 , 2 ನಮ್ಮ ಕಚೇರಿಯಲ್ಲೇ ಇದ್ದದನ್ನು ಈ ಕೇಸಿ ಗೆ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

28. ವಶಪಡಿಸಿಕೊಂಡ ವಸ್ತುಗಳನ್ನು ಪ್ರತ್ಯೇಕ ಬಟ್ಟೆಯ ಚೀಲದಲ್ಲಿ ಸುತ್ತಿ ಮೊಹರು ಮಾಡಿದ್ದಿರಾ ಎಂದರೆ ಅದೇ ಬಟ್ಟೆಯಲ್ಲಿ ಸುತ್ತಿ ಮೊಹರು ಮಾಡಿರುತ್ತೇವೆ . ಸ್ಥಳ ಮಹಜರು ಮಾಡುವಾಗ ಫೊಟೋ ತೆಗೆದಿದ್ದಿರಾ ಎಂದರೆ ಘಟನ ಸ್ಥಳ ದ ಫೊಟೋ ಇದೆ . ಮಹಜರು ಮಾಡುವ ಸಂದರ್ಭದಲ್ಲಿ ಮಹಜರು ಕ್ರಮ ಜರುಗಿಸುವ ಫೊಟೋಗಳನ್ನು ತೆಗೆದಿದ್ದೀರಾ ಎಂದರೆ ಇಲ್ಲ . ನಮ್ಮೆಲ್ಲರ ಬಳಿ ಆ್ಯಂಡ್ರಾಯ್ಡ್ ಮೊಬೈಲ್ ಫೋನ್ ಗಳಿವೆ . ಸ್ಥಳ ಮಹಜರನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ.

29. ಸ್ಥಳದ ಅಂಕ್ಷಾಂಶ , ರೇಖಾಂಶ ಹೇಳಲು ನೆನಪಿಲ್ಲ. ಆ ದಿನ ಆ ಸ್ಥಳಕ್ಕೆ ಹೋಗದೇ ಇರುವುದರಿಂದ ನನಗೆ ಹೇಳಲು ಸಾದ್ಯವಿಲ್ಲ ಎಂದರೆ ಸರಿಯಲ್ಲ.

30. ದಿಃ 12.6.25 ರಂದು ಗೊವಿಂದರಾಜು ಅವರ ಆದಾರ ಕಾರ್ಡನ್ನು ಪಡೆದುಕೊಂಡೆವು ಎಂದು ಹೇಳಿದ್ದು ಅದನ್ನು

ಅವರ ಹೆಂಡತಿಯಿಂದ ಪಡೆದುಕೊಂಡೆವು . ಆ ಸಂದರ್ಭದಲ್ಲಿ ಮಹಜರು ಕ್ರಮ ಜರುಗಿಸಿದ್ದೇವೆ . ಆದಾರ ಕಾರ್ಡು ಪಡೆಯುವಾಗ ಮಹಜರು ಕ್ರಮ ಜರುಗಿಸಬೇಕಾದರೆ ನಾನು , ಉಪ ವಲಯಾದಿಕಾರಿಗಳು-ನಾಗರಾಜು ಮತ್ತು ಬಸವರಾಜು ಇದ್ದೆವು .

31. ವ್ಯಕ್ತಿಯ ಮುಖ ಚಹರೆಯನ್ನು ಖಚಿತಪಡಿಸಿಕೊಂಡು ಮುಂದುವರೆದು ಘಟನಾ ಸ್ಥಳದ ಮಹಜರು ಜರುಗಿಸಿದೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಹೌದು. ನಮ್ಮ ಹೇಳಿಕೆ ಪ್ರಕಾರ 9 ನೇ ತಾರೀಖಿನಂದು ಯಾವುದೇ ಸ್ಥಳ ಮಹಜರು ಮಾಡಿಲ್ಲ , 12 ನೇ ತಾರೀಖಿನಂದು ಆರೋಪಿಯ ಆದಾರ ಕಾರ್ಡನ್ನು ಪಡೆದುಕೊಂಡು ಆತನ ಮುಖ ಚಹರೆಯನ್ನು ನೋಡಿ ಮುಂದುವರೆದು ಘಟನ ಸ್ಥಳದ ಮಹಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯ ಪ್ರಕಾರ 12 ನೇ ತಾರಿಖಿನಂದು 2 ನೇ ಆರೋಪಿಗೆ ಸಂಬಂದಿಸಿದಂತೆ ಸ್ಥಳ ಮಹಜರು ಮಾಡಿದ್ದೇವೆ .

32. ಮುದ್ದೆ ಮಾಲು 1 ರಿಂದ 4 ನ್ನು ಈ ಪ್ರಕರಣಕ್ಕೆ

ಸೃಷ್ಟಿಸಿಕೊಂಡು ಆರೋಪಿ 1 , 2 ರವರ ಮೇಲೆ ಸುಳ್ಳು ಪಿರ್ಯಾದಿ ಯನ್ನು ಮೇಲಾದಿಕಾರಿಯವರು ನೀಡಿದಂತೆ ನಾನು ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)